ರೈಲ್ವೆ ಯೋಜನೆಗಳು ವಿಳಂಬವಾಗುತ್ತಿರುವುದು

2457(3359); ಡಾ॥ ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ರಾಜ್ಯದಲ್ಲಿ ನೂತನ ರೈಲ್ವೆ ಮಾರ್ಗಗಳ ನಿರ್ಮಾಣ ಯೋಜನೆಗಳು ತೀರಾ ವಿಳಂಬ ಗತಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದ್ಯ ಜಾರಿ ಹಂತದಲ್ಲಿರುವ ರೈಲ್ವೆ ಮಾರ್ಗ ಯೋಜನೆಗಳ ಕಾಮಗಾರಿಗಳು ಯಾವುವು (ಸಮಗ್ರ ವಿವರಗಳನ್ನು ನೀಡುವುದು);

ಇ) ಆಲಮಟ್ಟಿ–ಯಾದಗಿರಿ, ಆಲಮಟ್ಟಿ–ಕೊಪ್ಪಳ ರೈಲ್ವೆ ಮಾರ್ಗ ನಿರ್ಮಾಣದ ಸಮೀಕ್ಷೆ ಯಾವ ಹಂತದಲ್ಲಿದೆ; (ಸಮೀಕ್ಷೆ ಪೂರ್ಣಗೊಂಡಿದ್ದರೆ ಅದರ ನೀಲ ನಕ್ಷೆ ಸಮೇತದ ಸಮಗ್ರ ವರದಿಯ ಪ್ರತಿಯನ್ನು ಒದಗಿಸುವುದು)

ಈ) ಇವರೆಡೂ ಯೋಜನೆಗಳ ಯೋಜನಾವಾರು ಅಂದಾಜು ಮೊತ್ತವೆಷ್ಟು (ಪ್ರತಿ ಯೋಜನೆಯ ವಿವರಗಳನ್ನು ಪ್ರತ್ಯೇಕವಾಗಿ ನೀಡುವುದು)

ಉ) ಉತ್ತರ ಕರ್ನಾಟಕ ಮತ್ತು ಹೈದರಾಬಾದ್–ಕರ್ನಾಟಕ ಭಾಗದ ಜನತೆಯ ದೀರ್ಘಕಾಲೀನ ಬೇಡಿಕೆಯಾಗಿರುವ ಇವರೆಡೂ ಯೋಜನೆಗಳಿಗೆ ಸರ್ಕಾರ, ಕೆ–ರೈಡ್ ಮೂಲಕ ತನ್ನ ಪಾಲಿನ ಹಣವನ್ನು ನೀಡಿ ಕಾಮಗಾರಿಯನ್ನು ಜರೂರಾಗಿ ಮುಗಿಸಲು ಕ್ರಮ ಕೈಗೊಳ್ಳಲಾಗುವುದೇ;

ಶ್ರೀ ಆರ್. ರೋಷನ್ ಬೇಗ್ (ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ಹಾಗೂ ಹಜ್ ಸಚಿವರು)

ಅ) ಬಂದಿರುತ್ತದೆ.

ಆ) ಅನುಬಂಧದಲ್ಲಿ ವಿವರಗಳನ್ನು ನೀಡಲಾಗಿದೆ.

ಇ) **ಆಲಮಟ್ಟಿ–ಯಾದಗಿರಿ:**

ರೈಲ್ವೆ ಇಲಾಖೆಯು ನೀಡಿದ ಮಾಹಿತಿಯಂತೆ 2012 ಫೆಬ್ರವರಿ ಮಾಹೆಯಲ್ಲಿ Preliminary Engineering cum Traffic Survey ಕರಡು ವರದಿಯನ್ನು ರೈಲ್ವೆ ಮಂಡಳಿಗೆ ಸಲ್ಲಿಸಲಾಗಿದ್ದು, ಪ್ರಧಾನ ವ್ಯವಸ್ಥಾಪಕರ ವರದಿಯನ್ನು ದಿನಾಂಕ: 15.04.2015ರಲ್ಲಿ ಪರಾಮರ್ಶಿಸಲಾಗಿದ್ದು. Traffic Surveyಯನ್ನು ಮರುಪರಿಶೀಲಿಸಲಾಗುತ್ತಿದೆ.

ಆಲಮಟ್ಟಿ–ಕೊಪ್ಪಳ:

Preliminary Engineering cum Traffic Survey ವರದಿಯನ್ನು ರೈಲ್ವೆ ಮಂಡಳಿಗೆ ಫೆಬ್ರವರಿ 2012ರಲ್ಲಿ ಸಲ್ಲಿಸಲಾಗಿತ್ತದೆ.

ಈ)

1) ಆಲಮಟ್ಟಿ–ಯಾದಗಿರಿ ರೂ. 1393.00 ಕೋಟಿಗಳು.

2) ಆಲಮಟ್ಟಿ ಕೊಪ್ಪಳ ರೂ. 904.00 ಕೋಟಿಗಳು.

ಉ) ರೈಲ್ವೆ ಇಲಾಖೆ ನೀಡುವ ಮಾಹಿತಿಯಂತೆ ಈ ಎರಡೂ ಯೋಜನೆಗಳನ್ನು ರೈಲ್ವೆ ಮಂತ್ರಾಲಯದ ವತಿಯಿಂದಲೇ ಕೈಗೆತ್ತಿಕೊಳ್ಳಲಾಗುತ್ತಿದೆ.

ಅನುಬಂಧ

ಕ್ರ ಸಂ.	ಪ್ರಗತಿಯಲ್ಲಿರುವ ರೈಲ್ವೆ ಯೋಜನೆಗಳು	ಪ್ರಾರಂಭವಾದ ವರ್ಷ	ಪ್ರಸ್ತುತ ಹಂತ	ರಾಜ್ಯದ ಪಾಲಿನ ಮೊತ್ತ (ರೂ ಕೋಟಿಗಳಲ್ಲಿ)	ಖಡುಗಡೆ ಮಾಡಿರುವ ಮೊತ್ತ (ರೂ. ಕೋಟಿಗಳಲ್ಲಿ)
1	ರಾಮನಗರ - ಮೈಸೂರು	2007	ಪ್ರಸಕ್ತ ವರ್ಷದಲ್ಲಿ ಪೂರ್ಣಗೊಳ್ಳುವ ಸಾಧ್ಯತೆಯಿದೆ.	503.98	468.14
2	ಬೆಂಗಳೂರು – ಶ್ರವಣಬೆಳಗೊಳ – ಹಾಸನ	1997	106 ಕಿ.ಮೀ.ಗಳ ಮಾರ್ಗ ಪೂರ್ಣಗೊಂಡಿದೆ.	467.21	376.17
3	ಬೀದರ್ – ಗುಲ್ಬರ್ಗಾ	2007	38 ಕಿ.ಮೀ.ಗಳ ಮಾರ್ಗ ಸಂಚಾರಕ್ಕೆ ಮುಕ್ತವಾಗಿದ್ದು, 64 ಕಿ.ಮೀ.ಗಳಲ್ಲಿ ಪರೀಕ್ಷಾರ್ಥ ಸಂಚಾರ ಮುಗಿದಿದೆ.	422.75	362.00
4	ಮುನಿರಾಬಾದ್ - ಮಹಬೂಬ್‌ನಗರ ಮಾರ್ಗ	2007	ಪ್ರಗತಿಯಲ್ಲಿದೆ.	350.00	175.00
5	ತುಮಕೂರು – ರಾಯದುರ್ಗ	2007–2008	ಪ್ರಗತಿಯಲ್ಲಿದೆ.	239.79	100.00
6	ಚಿಕ್ಕಮಗಳೂರು–ಸಕಲೇಶಪುರ	2013–14	ಭೂಸ್ವಾಧೀನ ಪ್ರಾರಂಭಿಸಬೇಕಿದೆ.	328.50	40.49
7	ಕುಡಚಿ – ಬಾಲಗಕೋಟೆ	2010–11	10 ಕಿ.ಮೀ.ಗಳ ಮಾರ್ಗದಲ್ಲಿ ಪರೀಕ್ಷಾರ್ಥ ಸಂಚಾರ ಮುಗಿದಿದೆ.	408.07	190.71
8	ಗದಗ – ವಾಡಿ	2013–14	ಭೂಸ್ವಾಧೀನ ಪ್ರಾರಂಭಿಸಬೇಕಿದೆ.	961.07	0
9	ಹೆಜ್ಜಾಲ – ಬಾಮರಾಜನಗರ	2013–14	ಭೂಸ್ವಾಧೀನ ಪ್ರಾರಂಭಿಸಬೇಕಿದೆ.	627.35	0